ನಮ್ಮ ಊರಿನ ಹಿರಿಕಿರಿಯರೆಲ್ಲರೂ ಭಿನ್ನ ಭೇದವಿಲ್ಲದೆ ಭಾಗವಹಿಸುತ್ತಿದ್ದನ್ನು ನಾನು ಕಂಡಿದ್ದೇನೆ. ಇದರ ಹಾಗೆಯೇ 'ಮಾರಮ್ಮನ ಪರಿಸೆ', 'ಕೋಡಿ ಪೂಜೆ', 'ಹೊನ್ನಾರು', 'ಹೊರಬೀಡು' ಊರಿನ ಹಿತವನ್ನು ಬಯಸುವ ಇಂತಹ ಮಂಗಳಕರ ಆಚರಣೆಗಳಲ್ಲಿ ಎಲ್ಲರೂ ಕೂಡಿಕೊಳ್ಳುತ್ತಿದ್ದರು. ಇಂತಹ ಪರಂಪರೆಗಳೇ ಸಮಾಜದಲ್ಲಿ ಒಡನಾಟದ ಬಾಂಧವ್ಯಗಳನ್ನು ಗಟ್ಟಿಗೊಳಿಸುತ್ತಿದ್ದವು. ಇಂತಹ ಕೊಡುಕೊಳುವಿಕೆಯ ಸಮಾಜ ನನ್ನದಾಗಿತ್ತು ಎಂದು ಹೇಳುವಲ್ಲಿ ನನಗೆ ಹೆಮ್ಮೆಯಿದೆ. ಆದ್ದರಿಂದಲೇ ಆಗ ಸಮಾಜ ಬಯಸುತ್ತಿದ್ದ 'ಸಾಮರಸ್ಯದ ಸ್ವರ್ಗ' ಭೂಮಿಯ ಮೇಲೆಯೇ ಇತ್ತು!

ದೂರದಲ್ಲಲ್ಲ! ಈಗ ನಮ್ಮ ಅಕ್ಕಪಕ್ಕದಲ್ಲೇ, ನಮ್ಮ ಕಣ್ಣಮುಂದೆಯೇ ಸಾಮರಸ್ಯದ ಹಕ್ಕಿಯ ಗೋಣು ಮುರಿಯುವ ನಡಾವಳಿಗಳನ್ನು ನಮ್ಮ ನತದೃಷ್ಟ ಕಣ್ಣುಗಳಿಂದ ನೋಡಬೇಕಾಗಿದೆ!

ನಮ್ಮ ಊರಿನಲ್ಲಿ ಯಾರದೇ ಮನೆಯಲ್ಲಿ ಮದುವೆ ಕಾರ್ಯ ನೇರವೇರಲಿ, ಆ ಸಂದರ್ಭದಲ್ಲಿ ಊರಿನ ಎಲ್ಲರೂ ಒಂದೇ ಕುಟುಂಬದಂತೆ ಕಾರ್ಯ ನಿರ್ವಹಿಸುತ್ತಿದ್ದರು. ಮದುವೆಗಾಗಿ ದವಸ–ಧಾನ್ಯವನ್ನು ಮಾಡಿಕೊಡುವುದು, ಹುರಿದ ಅಕ್ಕಿ ಬೀಸಿ ತಂಬಿಟ್ಟಿನ ಉಂಡೆ ಕಟ್ಟುವುದು, ಹಪ್ಪಳ ಅರೆಯುವುದು, ಸೌದೆ ಸೀಳೋದು, ಚಪ್ಪರ ಹಾಕೋದು, ಅಡುಗೆ ಮಾಡೋದು... ಇಂತಹ ಶ್ರಮದ ಕಾರ್ಯಗಳನ್ನು ಮಾಡುವಲ್ಲಿ ಮನೆಗೊಂದಾಳಿನಂತೆ ಬಂದು ಕೆಲಸ ಮಾಡುತ್ತಿದ್ದರು. ಮೊದಲೆಲ್ಲಾ ಮದುವೆಗೆ ಲಗ್ನಪತ್ರಿಕೆ ಅಚ್ಚು ಹಾಕಿಸಿ ಹಂಚುವ ಸಂಪ್ರದಾಯ ನಮ್ಮಲ್ಲಿರಲಿಲ್ಲ! ಆಗ ಮದುವೆ ಮನೆಯವರು ಎಲೆ–ಅಡಕೆ ತುಂಬಿದ ಒಂದು ಕೈ ಚೀಲ ಹಿಡಿದುಕೊಂಡು ನೆಂಟರಿಷ್ಟರ ಮನೆಗಳಿಗೆ ಹೋಗಿ '...ಬರೋ ಮಂಗಳಾರ ಚಪ್ಪರ, ಬುಧವಾರ ಶಾಸ್ತ್ರ, ಬ್ರೇಸ್ತವಾರ ಧಾರೆ. ಎಲ್ಲರೂ ತಪ್ಪದೆ ಬನ್ರವ್ವ' ಎಂದು ವೀಳ್ಯ ಕೊಟ್ಟು ಮದುವೆಗೆ ಕರೆಯುತ್ತಿದ್ದರು. ಇನ್ನು ಶಾಸ್ತ್ರದ ದಿವಸ ಊರಿನಲ್ಲಿ ಮನೆ ಮನೆಗೂ ಹೋಗಿ, 'ಇವತ್ತು ನಾಳೆ ಮನೆಯಲ್ಲಿ ಒಲೆಗೆ ಬೆಂಕಿ ಕಾಣಿಸಬೇಡಿ ಕಣ್ರವ್ವ! ಎಲ್ರೂ ಕಂಡೀಸನ್ನಾಗಿ ಬನ್ನಿ' ಎಂದು ಹೇಳಿಬರುತ್ತಿದ್ದರು. ಇದು ನಮ್ಮೂರಿನಲ್ಲಿ ಮದುವೆಗೆ ಕರೆಯುತ್ತಿದ್ದ ವಿಧಾನ.

ನಮ್ಮ ಊರಿನ ಹೆಣ್ಣನ್ನು ಬೇರೆ ಊರಿನ ಗಂಡಿನೊಂದಿಗೆ ಮದುವೆ ಮಾಡಿ ಕಳುಹಿಸಿಕೊಡುವ ಸನ್ನಿವೇಶದಲ್ಲಿ ಇಡೀ ಕೇರಿಯೇ ರೋದಿಸುತ್ತಿದ್ದನ್ನು ನನ್ನ ಎಳೆವೆಯ ಕಣ್ಣುಗಳಲ್ಲಿ ನೋಡಿ ಸೋಜಿಗಪಟ್ಟಿದ್ದೇನೆ! ಮದುವೆ ಮುಗಿದ ಮೇಲೆ ಹೆಣ್ಣನ್ನು ಗಂಡನ ಮನೆಗೆ ಕಳುಹಿಸಿಕೊಡುವಾಗ ಇಡೀ ಊರು ದುಃಖದಲ್ಲಿ ಅದ್ದಿ ತಗೆದಂತಿರುತ್ತಿತ್ತು. ಹೆಣ್ಣು ತನ್ನ ಕೇರಿಯ ಪ್ರತಿಯೊಂದು ಮನೆಗೂ ಹೋಗಿ, ಕುಟುಂಬದ ಹಿರಿಯರಿಗೆ ವೀಳ್ಯ ನೀಡಿ, ಕಾಲಿಗೆ ನಮಸ್ಕರಿಸಿ, ತುಂಬಿದ ಕಣ್ಣುಗಳಿಂದ, 'ಹೋಗಿ ಬರುತ್ತೇನೆ ಅಕ್ಕಯ್ಯಾ, ಹೋಗಿ ಬರುತ್ತೇನೆ ಮಾವಯ್ಯ' ಎಂದು ಬಿಕ್ಕಳಿಸುತ್ತಾ ಸೆರಗಿನಿಂದ ಮುಖ ಮುಚ್ಚಿಕೊಂಡು ಹೇಳುತಿದ್ದಳು. ಅವಳು ಅಳುವುದನ್ನು ನೋಡಿ ಮನೆಯವರೆಲ್ಲಾ ತಾವೂ ಅಳುತ್ತಾ, 'ಹೋಗಿ ಬಾರವ್ವ, ಅಪರಂಜಿಯಂಥ ಹುಡುಗಿ ನೀನು. ನೀನು ಹೊಸಿಲು ತುಳಿದ ಮನೆ ಬಂಗಾರವಾಗಲಿ' ಎಂದು ಹೇಳಿ, ಅವಳಿಗೆ ಮಡಿಲಕ್ಕಿ ತುಂಬಿ ಬೀಳ್ಕೊಡುತ್ತಿದ್ದರು. ಹೀಗೆ ಊರಿನ ಎಲ್ಲರ ಮನೆಗೂ ಹೋಗಿ ಅವಳು ಹೇಳಿಬರುವ ಹೊತ್ತಿಗೆ ಹಗಲು ಸಂಜೆಯನ್ನು ಎಟಕಿಸಿಕೊಳ್ಳುವ ಹೊತ್ತಾಗುತ್ತಿತ್ತು! ಯಾವುದೇ ಜಾತಿಯವರ ಮನೆಗೆಹೋದರೂ ಇದೇ ದೃಶ್ಯ ಪುನರಾವರ್ತನೆಯಾಗುತ್ತಿತ್ತು. ಎಲ್ಲ ಜಾತಿಯವರನ್ನೂ ಇವಳು, 'ಅಕ್ಕಯ್ಯ', 'ದೊಡ್ಡಿ', 'ಚಿಕ್ಕಿ' ಅಥವಾ 'ಚಿಕ್ಕವ್ವ' ಅಂತಲೋ ಕರೆದು, ಅವರನ್ನು ಅಪ್ಪಿಕೊಂಡು ಹೊರಬರುತ್ತಿದ್ದಳು. ಈ ಅಗಲುವಿಕೆಯ ದುಃಖ, ಮನೆಯಿಂದ ಮನೆಗೆ ಹೆಚ್ಚಾಗುತ್ತಿತ್ತೇ ಹೊರತು, ಅದರ ಭಾರ ಇಳಿಯುತ್ತಿರಲಿಲ್ಲ! ಅವಳ ಹಿಂದೆ ಬಂದ ಗೆಣಕಾತಿಯರ ದಂಡು, ಎಲ್ಲರ ಮನೆಯಲ್ಲೂ ಕೊಟ್ಟ ಮಡಿಲಕ್ಕಿಯನ್ನು ಹೊತ್ತು ಬರುತ್ತಿತ್ತು. ಅವರಿಗೋ ಮಡಿಲಕ್ಕಿಯ ಭಾರ ಒಂದು ಕಡೆಯಾದರೆ;